**ದಿನಾಂಕಃ 08.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**<u>ಪಾಟೀಸವಾಲುಃ ವಾದಿಗಳ ಪರ ವಕೀಲರಾದ ಶ್ರೀ ಬಿ.ಎಸ್.ವೈ ಅವರಿಂದ–</u>**

1. ಈ ಕೇಸಿನ ವಿಚಾರವನ್ನು ನಾನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ. ನಾನು ಎಮ್.ಬಿ.ಎ ವಿದ್ಯಾಭ್ಯಾಸ ಮಾಡಿದ್ದೇನೆ. ಈ ದಾವಾದಲ್ಲಿ ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ನನಗೆ ತಿಳಿದರುವಷ್ಟು ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಹಾಲಿ ನಮ್ಮಲ್ಲಿ ಬೇರೆ ಯಾವುದೇ ದಾಖಲಾತಿಗಳು ಇಲ್ಲ.

2. ವಾದಿಯಾದ ನನ್ನ ತಂದೆ ಹಿಂದೆ ಹೋಟೇಲ್ ವ್ಯವಹಾರ ನಡೆಸುತ್ತಿದ್ದರು ಹಾಲಿ ವ್ಯವಸಾಯ ಮಾಡುತ್ತಾರೆ. ಅವರಿಗೆ ಈಗ 68 ವರ್ಷ ವಯಸ್ಸಾಗಿದೆ. ನನ್ನ ತಂದೆ ಆರೋಗ್ಯವಾಗಿ ಚೆನ್ನಾಗಿ ಓಡಾಡಿಕೊಂಡಿದ್ದಾರೆ ಎಂದರೆ ಅವರಿಗೆ ಕೆಲವು ಅನಾರೋಗ್ಯಗಳಾದ ಬಿ.ಪಿ ಹಾಗೂ ಸಕ್ಕರೆ ಕಾಯಿಲೆ ಇದೆ. ವಾದಿಯೇ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಅವರಿಗೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಬಿ.ಪಿ ಹಾಗೂ ಸಕ್ಕರೆ ಕಾಯಿಲೆಗಳು ಇವೆ ಎಂದು ನನಗೆ ಜಿ.ಪಿ.ಎ ಕೊಟ್ಟಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ನನ್ನ ತಂದೆಗೆ ಬಿ.ಪಿ ಹಾಗೂ ಸಕ್ಕರೆ ಕಾಯಿಲೆ ಕಾಯಿಲೆಗಳು ಇವೆ ಎಂಬ ವಿಚಾರವನ್ನು ನಿಪಿ.1 ಜಿ.ಪಿ.ಎ ನಲ್ಲಿ ನಮೂದಿಸಿಲ್ಲ.

3. ನಮ್ಮ ತಂದೆಗೆ ಯಾವುದೇ ಬಿ.ಪಿ ಹಾಗೂ ಸಕ್ಕರೆ ಕಾಯಿಲೆಗಳು ಇಲ್ಲ, ಆದರೆ ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಗೆ ಬರುತ್ತವೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಬಿ.ಪಿ ಹಾಗೂ ಸಕ್ಕರೆ ಕಾಯಿಲೆಗಳು ಇವೆ ಎಂದು ನಿಪಿ.1 ರಲ್ಲಿ ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಆ ರೀತಿ ಕಾಯಿಲೆಗಳು ಇದ್ದಿದ್ದೆ ಆದಲ್ಲಿ ನಿಪಿ.1 ರಲ್ಲಿ ನಮೂದು ಮಾಡುತ್ತಿದ್ದೇವು ಆ

ಕಾರಣದಿಂದಲೇ ನಿಪಿ.1 ರಲ್ಲಿ ಅಂತಹ ಯಾವುದೇ ವಿಚಾರವನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

4. ನಿಪಿ.1 ಜಿ.ಪಿ.ಎ ತಯಾರು ಮಾಡಲು ಛಾಪಾ ಕಾಗದವನ್ನು ಹೋದ ವರ್ಷ ನಾನೇ ಖರೀದಿ ಮಾಡಿದ್ದೆ ಆದರೆ ಅದನ್ನು ಖರೀದಿ ಮಾಡಿದ ನಿಖರ ದಿನಾಂಕ ನನಗೆ ಗೊತ್ತಿಲ್ಲ. ಛಾಪಾ ಕಾಗದವನ್ನು ಖರೀದಿ ಮಾಡಿದ ಎಷ್ಟು ದಿನಗಳ ನಂತರ ಜಿ.ಪಿ.ಎ ತಯಾರಿಸಿದ್ದೇವೆ ಎಂದರೆ ಖರೀದಿ ಮಾಡಿದ ಮುಂದಿನ ತಿಂಗಳಲ್ಲಿ ತಯಾರು ಮಾಡಿಸಿದ್ದೇವೆ. 2023 ನೇ ಸಾಲಿನಲ್ಲಿ ನಿಪಿ.1 ಛಾಪಾ ಕಾಗದವನ್ನು ಖರೀದಿಸಲಾಗಿದೆ ಎಂದರೆ ಸಾಕ್ಷಿ ಹೌದು ಅದನ್ನು 2023 ರಲ್ಲಿಯೇ ಖರೀದಿ ಮಾಡಲಾಗಿದೆ ಆದರೆ ನಾನು 2024 ನೇ ಸಾಲಿನಲ್ಲಿ ಇದ್ದೇವೆ ಎಂದು ತಪ್ಪಾಗಿ ಭಾವಿಸಿಕೊಂಡು ಹೋದ ವರ್ಷ ನಾನೇ ಖರೀದಿ ಮಾಡಿದ್ದೆ ಎಂದು ನುಡಿದಿರುತ್ತೇನೆ ಎಂದು ಹೇಳುತ್ತಾರೆ.

5. ನಿಪಿ.1 ರ ದಾಖಲೆಯನ್ನು ಯಾವ ನೋಟರಿ ಬಳಿ ಮಾಡಿಸಲಾಗಿದೆ ನನಗೆ ಗೊತ್ತಿಲ್ಲ. ನಿಪಿ.1 ರ ದಾಖಲೆಗೆ ಸಾಕ್ಷಿಯಾಗಿ ನನ್ನ ಚಿಕ್ಕಪ್ಪ ರಾಜೇಶ್ ಭಟ್ಟ ಅವರು ಸಹಿ ಹಾಕಿದ್ದಾರೆ ಉಳಿದಂತೆ ಯಾರು ಸಹಿ ಮಾಡಿದ್ದಾರೆ ನನಗೆ ನೆನಪಿಲ್ಲ. ನಿಪಿ.1 ಅನ್ನು ನೋಟರಿ ಅವರ ಬಳಿ ನೊಂದಣಿ ಮಾಡಿಸಿದ್ದೇವಾ ಮತ್ತು ನೋಟರಿಯವರ ರಿಜಿಸ್ಟರ್ ನಾನು ಹಾಗೂ ನನ್ನ ತಂದೆ ಸಹಿ ಮಾಡಿದ್ದೇವಾ ಎಂದರೆ ಹೌದು ನಾನು ಹಾಗೂ ನನ್ನ ತಂದೆ ಸಹಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನೋಟರಿಯವರು ದಾಖಲೆ ನೊಂದಣಿ ಮಾಡಿಕೊಂಡಿದ್ದರೆ ಅದರ ಸಂಖ್ಯೆಯನ್ನು ನಮೂದು ಮಾಡುತ್ತಾರೆ ಎಂದರೆ ಸರಿ. ನಿಪಿ.1 ರ ದಾಖಲೆಯ ಮೇಲೆ ನೋಟರಿಯವರು ನಿರ್ವಹಿಸುವ ರಿಜಿಸ್ಟರ್ ನ ಕ್ರಮ ಸಂಖ್ಯೆ ಇರುವುದಿಲ್ಲ, ನಿಪಿ.1 ಅನ್ನು ನಾವು ಸೃಷ್ಟಿ ಮಾಡಿ, ಹಾಜರುಪಡಿಸುತ್ತೇವೆ ಎಂದರೆ ಸರಿಯಲ್ಲ.

6. ದಿಃ 04.08.2014 ರಂದು ಕ್ರಯದ ಕರಾರು ಪತ್ರ ಆಗಿತ್ತು. ಸದರಿ ದಿಃ 04.08.2014 ರ ಕ್ರಯದ ಕರಾರಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳಿಗೆ ಅಕ್ಟೋಬರ್ – 2018 ರಂದು ನೋಟೀಸ್ ನೀಡಿದ್ದೇವು. ಸದರಿ ಅಕ್ಟೋಬರ್ – 2018 ಕ್ಕೂ ಹಿಂದೆ

ಕ್ರಯದ ಕರಾರಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳಿಗೆ ಯಾವುದೇ ಲೀಗಲ್ ನೋಟೀಸ್ ಕೊಟ್ಟಿರಲಿಲ್ಲ. ಆದರೆ ಆಗಾಗೆ ಮೌಖಿಕವಾಗಿ ಅವರಲ್ಲಿ ಕೇಳುತ್ತಿದ್ದೇವು. ಈ ದಾವದಲ್ಲಿ ಮಣಿಕಂಠ ಎಂಬುವವರನ್ನು 4 ನೇ ಪ್ರತಿವಾದಿಯಾಗಿ ಸೇರ್ಪಡೆ ಮಾಡಿದ್ದೇವೆ ಎಂದರೆ ಸರಿ. ನಿಪಿ.6 ರ ಕ್ರಯದ ಕರಾರು ಪತ್ರದಲ್ಲಿ ಈ ಮಣಿಕಂಠರವರ ಹೆಸರು ಮತ್ತು ಸಹಿ ಇದೆಯಾ ಎಂದರೆ ಸಾಕ್ಷಿ ಅವರ ಹೆಸರು ನಮೂದಾಗಿದೆ ಆದರೆ ಅವರ ಸಹಿ ಇಲ್ಲ ಕಾರಣ ಅವರು ಕರಾರು ಸಮಯದಲ್ಲಿ ಮೈನರ್ ಆಗಿದ್ದು ಅವರ ಪರವಾಗಿ ಅವರ ತಂದೆ 1 ನೇ ಪ್ರತಿವಾದಿ ಸಹಿ ಮಾಡಿದ್ದಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

7. ನಿಪಿ.6 ರಲ್ಲಿ ನನ್ನ ಹೆಸರು ಮತ್ತು ವಿವರಗಳು ನಮೂದಾಗಿಲ್ಲ ಮತ್ತು ಅದಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ.6 ಕ್ಕೆ ನಾನು ಪಕ್ಷಕಾರನಲ್ಲ, ನನಗೆ ಇದರ ಯಾವುದೇ ಮಾಹಿತಿ ಇಲ್ಲ, ಆದ್ದರಿಂದ ನಾನು ಈ ಪತ್ರದ ಬಗ್ಗೆ ಸಾಕ್ಷಿ ನುಡಿಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪತ್ರ ತಯಾರಿಸುವಾಗ ನಾನು ಖುದ್ದು ಹಾಜರಿದ್ದು ಎಲ್ಲದರ ಬಗ್ಗೆ ನಿಗ ವಹಿಸಿದ್ದೆ ಎನ್ನುತ್ತಾರೆ. ಈ ರೀತಿ ನಾನು ನಿಪಿ.6 ರ ಎಲ್ಲಾ ಉಸ್ತುವಾರಿ ವಹಿಸಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನೊಂದಣಿ ಶುಲ್ಕದ ಹಣ ನನ್ನ ಖಾತೆಯಿಂದಲೇ ಹೋಗಿದೆ ಎಂದು ಚಲನ್ ಹಾಜರುಪಡಿಸಿದ್ದೆ ಎನ್ನುತ್ತಾರೆ. ಆ ಬಗ್ಗೆ ನಿಪಿ.6 ರ 1 ನೇ ಪುಟದ ಹಿಂಬದಿಯಲ್ಲಿ ನನ್ನ ಬ್ಯಾಂಕ್ ಖಾತೆಯ ಹಾಗೂ ಚೆಕ್ ನ ವಿವರಗಳು ನಮೂದು ಇದೆ ಎನ್ನುತ್ತಾರೆ. ಸದರಿ ವಿವರಗಳು ನನ್ನ ಬ್ಯಾಂಕ್ ಖಾತೆಗೆ ಸಂಬಂಧಪಟ್ಟಿವೆ ಎಂಬ ಬಗ್ಗೆ ನಾನು ನನ್ನ ಬ್ಯಾಂಕ್ ಖಾತೆಯ ದಾಖಲೆಯನ್ನು ಹಾಜರುಪಡಿಸಿಲ್ಲ.

8. ನಿಪಿ.6 ರ ದಾಖಲೆಯಾದ 2 ½ ವರ್ಷಗಳ ನಂತರದಲ್ಲಿ 3 ತಿಂಗಳಿಗೊಮ್ಮೆ ನಾವು ಪ್ರತಿವಾದಿಯನ್ನು ಸಂಪರ್ಕಿಸಿ ಕ್ರಯಪತ್ರ ಮಾಡಿಕೊಡಲು ಕೇಳಿಕೊಳ್ಳುತ್ತಿದ್ದೇವು ಎಂದು ನಾನು ತಿಳಿಸಿದ್ದು, ಈ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಿಪಿ.5 ರ ಕ್ರಯದ ಕರಾರಿನಲ್ಲಿ 3 ಮತ್ತು 4 ನೇ ಪ್ರತಿವಾದಿಗಳ ಹೆಸರಿನ ಮತ್ತು ಸಹಿಯ ಉಲ್ಲೇಖ ಇರುವುದಿಲ್ಲ ಎಂದರೆ ಸರಿ.

9. ಯಾವುದಾದರೂ ದಾಖಲಾತಿಯಲ್ಲಿ ಏನಾದರೂ ತಿದ್ದುಪಡಿ ಆದಲ್ಲಿ ಆ ಬಗ್ಗೆ ದಾಖಲೆ ಕೊನೆಯಲ್ಲಿ ತಿದ್ದುಪಡಿ ಎಂಬ ಕಡೆ ವಿವರಗಳನ್ನು ನಮೂದಿಸುತ್ತಾರೆ ಎಂದರೆ ಸರಿ. ನಿಪಿ.5 ರಲ್ಲಿ ತಿದ್ದುಪಡಿ ಆಗಿದ್ದು ಆ ತಿದ್ದುಪಡಿ ಬಗ್ಗೆ ದಾಖಲೆಯಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ಈ ಕೇಸಿಗೆ ಸಂಬಂಧಪಟ್ಟಂತೆ ಸಾಕ್ಷಿದಾರರು ಇದ್ದಾರೆ. ನಾವು ಸಾಕ್ಷಿದಾರರ ವಿಚಾರಣೆ ಮಾಡುತ್ತೇವೆ.

10. ದಾವ ಸ್ವತ್ತಿನಲ್ಲಿ ನಾವೇ ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ನಿಪಿ.6 ರಲ್ಲಿ ನಮೂದು ಇದೆ ಅದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನಾವು ದಾವ ಸ್ವತಿನ ಯಾವುದೇ ಸ್ವಾಧೀನದಲ್ಲಿ ಇರುವುದಿಲ್ಲ, ಪ್ರತಿವಾದಿಗಳ ಸ್ವತ್ತನ್ನು ಲಪಾಟಾಯಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪೊಲೀಸ ಅಧಿಕಾರಿಗಳ ಜೊತೆ ಶಾಮೀಲಾಗಿ ಪ್ರತಿವಾದಿಗಳ ವಿರುದ್ಧ ನಿಪಿ.2 ರಿಂದ 4 ರ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಾದಿಯು ತಮ್ಮ ಪರ ಸಾಕ್ಷಿದಾರರ ಪರ ಮುಖ್ಯವಿಚಾರಣೆ ಮುಗಿಸಿದ ನಂತರ ಪಾಟೀಸವಾಲು ಮುಂದುವರಿಸುವುದಾಗಿ ನುಡಿದ ಕಾರಣ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.